ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.

# ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 333/2021 .

ಪ್ರಾ.ಸಾ. : 2
ಚಾ.ಸಾ. : 1

| | | |
|---|---|---|
| ಹೆಸರು | : | ಸತೀಶ್ |
| ತಂದೆಯ ಹೆಸರು | : | ಸಣ್ಣಪ್ಪ |
| ವಯಸ್ಸು | : | 51 ವರ್ಷ |
| ಉದ್ಯೋಗ | : | ಪಿ ಡಿ ಓ |
| ವಿಳಾಸ | : | ಬಾಳೆಲೆ |

... ..................................................................................................... ...

ದಿನಾಂಕ 13 ನೇ ಜೂನ್ 2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಸ ಸ ಅ ರವರಿಂದ :-

ನಾನು 2018 ರಿಂದ 2021 ರ ತನಕ ಕಾನುರು ಗ್ರಾಮ ಪಂಚಾಯಿತಿಯಲ್ಲಿ ಕೆಲಸ ಮಾಡಿರುತ್ತೇನೆ.

2020 ರಲ್ಲಿ ರಂದು ರಾತ್ರಿ 10 ಗಂಟೆಗೆ ಹರಿಹರ ಕೋತೂರು ಜಂಕ್ಷನ್ ನಲ್ಲಿ ಲಾರಿ ಬಂದು ಅಂಗಡಿ ಹಾಗೂ ವಿದ್ಯುತ್ ಕಂಬ, ಪಂಚಾಯಿತಿಗೆ ಸೇರಿದ ಬಸ್ ತಂಗುದಾಣಕ್ಕೆ ಡಿಕ್ಕಿ ಪಡಿಸಿತ್ತು, ಸದರಿ ವಿಚಾರ ನನಗೆ ಮರುದಿನ ತಿಳಿಯಿತು. ಕುಟ್ಟ ಠಾಣೆಗೆ ಹೋಗಿ ನಾನು ದೂರು ನೀಡಿರುತ್ತೇನೆ. ಪ್ರಕರಣ ದಾಖಲಾಯಿತು. ಅದೇ ದಿನ ಪೊಲೀಸರು ಸ್ಥಳಕ್ಕೆ ಬಂದು ಪರಿಶೀಲಿಸಿರುತ್ತಾರೆ. ದೂರನ್ನು ನಿ ಪಿ 14 ಎಂದು, ಸಾಕ್ಷಿ ಸಹಿಯನ್ನು ನಿ ಪಿ 14 ಎ ಎಂದು ಗುರುತಿಸಲಾಯಿತು.

> (ಈ ಹಂತದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿಕೊಂಡ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ ಹಾಗೂ ಸ.ಸ.ಅ.ರವರ ವಾದವನ್ನು ಆಲಿಸಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)

ಪಾಟೀ ಸವಾಲು: - ಮಾನ್ಯ ಸ ಸ ಅ ರವರಿಂದ : -

ದಿ. 12.09.2020 ರಂದು ಎರಡನೇ ಶನಿವಾರ ಆಗಿತ್ತು. ಆದಿನ ನಾನು ಮನೆಯಲ್ಲಿದ್ದೆ ಎಂದರೆ ಸರಿ. ಮ. 12.30 ಕ್ಕೆ ತಾಯಮ್ಮ ಎಂಬುವವರು ನನಗೆ ದೂರವಾಣಿ ಕರೆ ಮಾಡಿ ಹಿಂದಿನ ದಿನ ಅಂದರೆ ದಿ. 11.09.2020 ರಂದು ರಾತ್ರಿ 10 ಗಂಟೆಗೆ ಹರಿಹರ ಕೋತೂರು ಜಂಕ್ಷನ್ ನಲ್ಲಿ ಲಾರಿ ಬಂದು ಅಂಗಡಿ ಹಾಗೂ ವಿದ್ಯುತ್

ಕಂಬ, ಪಂಚಾಯಿತಿಗೆ ಸೇರಿದ ಬಸ್ ತಂಗುದಾಣಕ್ಕೆ ಡಿಕ್ಕಿ ಪಡಿಸಿತ್ತು ಎಂದು ತಿಳಿಸಿದರು ಎಂದರೆ ಸರಿ. ನಾನು ತಕ್ಷಣ ಸ್ಥಳಕ್ಕೆ ಹೋಗಿ ಪರಿಶೀಲಿಸಿದೆ ಎಂದರೆ ಸರಿ. ಬಸ್ ತಂಗುದಾಣಕ್ಕೆ ಹಾಗೂ ಶೆಡ್‌ಗೆ ಲಾರಿ ಡಿಕ್ಕಿಪಡಿಸಿರುವ ಕಾರಣ ಸುಮಾರು 2 ಲಕ್ಷ ನಷ್ಟ ಆಗಿದೆ ಎಂದು ದೂರು ನೀಡಿದ್ದೇನೆ ಎಂದರೆ ಸರಿ. ಡಿಕ್ಕಿಪಡಿಸಿದೆ ಎಂದು ಹೇಳುವ ಲಾರಿ ಸಂಖ್ಯೆ ಕೆ ಎ 01 ಎಹೆಚ್ 3407 ಆಗಿತ್ತು ಎಂದರೆ ಸರಿ. ಸದರಿ ಲಾರಿಯ ಚಾಲಕ ಅತಿವೇಗ ಮತ್ತು ಅಜಾರುಾಕತೆಯಿಂದ ಲಾರಿ ಚಲಾಯಿಸಿ ಡಿಕ್ಕಿ ಪಡಿಸಿದ್ದಾರೆ ಎಂದು ತಿಳಿಯಿತು ಎಂದರೆ ಸರಿ.

<u>ಪಾಟೀ ಸವಾಲುಃ - ಆರೋಪಿ ಪರ ವಕೀಲರಿಂದ ಃ-</u>

ದೂರನ್ನು ಒಂದು ದಿನ ತಡವಾಗಿ ನೀಡಲಾಗಿದೆ ಎಂದರೆ ಸರಿ. ನಾನು ಸ್ಥಳಕ್ಕೆ ಹೋಗಿರುತ್ತೇನೆ. ಬಸ್ ನಿಲ್ದಾಣ ಹಾಗೂ ಶೆಡ್ ಸರ್ಕಾರಕ್ಕೆ ಸೇರಿದ್ದು ತೋರಿಸಲು ದಾಖಲಾತಿ ನೀಡಿಲ್ಲ ಎಂದರೆ ಅದು 10 – 15 ವರ್ಷ ಹಳೆಯ ಕಟ್ಟಡ ಎನ್ನುತ್ತಾರೆ. ಘಟನೆ ಆಗಿದೆ ಎಂದು ಹೇಳಿದ ನಂತರ ನಾವು ಸದರಿ ಬಸ್ ನಿಲ್ದಾಣ ರಿಪೇರಿ ಮಾಡಿರುವುದಿಲ್ಲ. ಸದರಿ ಬಸ್ ನಿಲ್ದಾಣ ಹಾಗೂ ಶೆಡ್ ಯಾವ ಸರ್ವೆ ನಂ ಗೆ ಸೇರಿದೆ ಎಂದು ದಾಖಲಾತಿ ನೀಡಿಲ್ಲ ಎಂದರೆ ಸರಿ. ಸದರಿ ಜಾಗದ ಸರ್ವೆ ನಂ ನಲ್ಲಿ ಸರ್ಕಾರ ಎಂದು ನಮೂದಾಗಿಲ್ಲ ಎಂದರೆ ಸರಿ. ಘಟನೆ ನನಗೆ ಪೊಲೀಸರು ಹೇಳಿದ ನಂತರ ನನಗೆ ತಿಳಿಯಿತು ಎಂದರೆ ತಾಯಮ್ಮ ಹೇಳಿದರು ಎನ್ನುತ್ತಾರೆ. ಲಾರಿ ಯಾರಿಗೆ ಸೇರಿದ್ದು ಎಂಬ ಬಗ್ಗೆ ಹಾಗೂ ಆರೋಪಿ ಯಾರು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ. ಬಸ್ ನಿಲ್ದಾಣ ಹಾಗೂ ಶೆಡ್ ಸರ್ಕಾರಕ್ಕೆ ಸೇರಿಲ್ಲದ ಕಾರಣ ಯಾವುದೇ ನಷ್ಟ ಭತ್ಯೆ ಕೇಳಲು ಬರುವುದಿಲ್ಲ ಎಂದರೆ ಸರಿ. ಆರೋಪಿಗೂ, ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆ</u> :- - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿರುತ್ತದೆ)

ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sd/xxx-

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.

(ಸಾಕ್ಷಿಯವರ ಸಹಿ)